ಈ ದಿನ ದಿನಾಂಕಃ 25.02.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀಸವಾಲು ವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ</u>**

1ನೇ ಪ್ರತಿವಾದಿ ನನ್ನ ತಾಯಿ. ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಆಕೆಗೆ ತೊಂದರೆ ಇಲ್ಲ. ದಾವಾ ಆಸ್ತಿಯ ಸತ್ಯ ಸಂಗತಿ ಗೊತ್ತಾಗಬಾರದೆಂದು ಆಕೆಯ ಹೆಸರಿನಲ್ಲಿ ಸುಳ್ಳು ಜಿಪಿಎ ಬರೆದುಕೊಂಡು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಂದಿಗೂ ಆಕೆ ನ್ಯಾಯಾಲಯಕ್ಕೆ ಬರಲು ತಯಾರಿದ್ದಾರೆ.

2. ವಾದಿ ನಮ್ಮೂರಿನವರು. ದಾವಾ ಎ ಸ್ವತ್ತನ್ನು ನೋಡಿದ್ದೇನೆ. ಸದರಿ ಜಮೀನಿನ ಚೆಕ್ಕುಬಂದಿ ಸರಿಯಾಗಿದೆ. ದಾವಾ ಎ ಆಸ್ತಿಯ ಚೆಕ್ಕುಬಂದಿಯಲ್ಲಿ ಮನೆಯಿಲ್ಲ. ದಕ್ಷಿಣದಲ್ಲಿರುವ ಪಿಡಬ್ಲ್ಯೂಡಿ ರಸ್ತೆಯ ಉತ್ತರ ಬಾಗಕ್ಕೆ ನಮ್ಮ ಮನೆಗಳಿವೆ. ವಾದಿಯ ಅಜ್ಜಿ ಪಾರ್ವತಮ್ಮ. ನಮ್ಮ ಮನೆಯಿಂದ ಉತ್ತರಕ್ಕೆ ಆಕೆಯ ಜಮೀನಿರುತ್ತದೆ. ಆದರ ಸರ್ವೆ ನಂ. 1/3 ಎಂದರೆ ಸರಿ. ಆ ಆಸ್ತಿಯ ದಾಖಲೆಗಳನ್ನು ನೋಡಿರುತ್ತೇನೆ.

3. ಸದರಿ ದಾವಾ ಎ ಆಸ್ತಿ ಹಿಸ್ಸಾ ಪತ್ರದಂತೆ ವಾದಿಯ ಪಾಲಿಗೆ ಬಂದಿರುವ ವಿಚಾರ ಗೊತ್ತಿಲ್ಲ. ದಾವಾ ಎ ಆ ಸ್ತಿಯಲ್ಲಿ ನಮ್ಮ ತಂದೆ ರಂಗಪ್ಪನವರಿಗೆ ಪಾರ್ವತಮ್ಮನವರು ಆಸ್ತಿಯನ್ನು ಕ್ರಯಕ್ಕೆ ನೀಡಿರುತ್ತಾರೆ. ಆ ಕುರಿತು ದಾಖಲೆ ಇದ್ದು ಅದನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತೇನೆ. ಆ ದಾಖಲೆ 1983-84 ರಲ್ಲಾಗಿದೆ. ಅದು ನೋಂದಾಣಿಯಾಗಿಲ್ಲ.

4. ಪಾರ್ವತಮ್ಮನ ಮೊಮ್ಮಕ್ಕಳು ಶಿಕ್ಷಣಕ್ಕಾಗಿ ಚಿಕ್ಕವಯಸ್ಸಿನಿಂದಲೂ ಬೇರೆ ಊರುಗಳಲ್ಲಿ ವಾಸ ಮಾಡುತ್ತಿದ್ದರೂ ಎಂದರೆ ಸರಿ. ವಾದಿಯ ಚಿಕ್ಕವಯಸ್ಸಿನಲ್ಲಿಯೇ ಮರಣ ಹೊಂದಿರುತ್ತಾರೆ. ಆದ್ದರಿಂದ ಪಾರ್ವತಮ್ಮ, ಅವರ ಸೊಸೆ ಸೀತಮ್ಮ ಗ್ರಾಮದಲ್ಲಿನ ಆಸ್ತಿಗಳನ್ನು ಸಾಗುವಳಿ ಮಾಡುತ್ತಿದ್ದರು. ವಾದಿಯವರ ತಂದೆ ಜೀವಂತವಾಗಿದ್ದಾಗ

ಕುಟುಂಬದ ಸ್ವತ್ತಿಗಳೆಲ್ಲವೂ ಅವರ ಸ್ವಾಧೀನದಲ್ಲಿದ್ದವು ಎಂದರೆ ಸಾಕ್ಷಿ ನಾವಿರುವ ಮನೆಯ ಜಾಗವನ್ನು ಅವರೆ ಮಾರಾಟ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ನಮಗೆ ಆಸ್ತಿ ಮಾರಿದ ಕುರಿತು ಕ್ರಯದ ದಾಖಲೆಗಳ ಬಗ್ಗೆ ನನ್ನ ತಂದೆಗೆ ಗೊತ್ತು.

5. ನಾವಿರುವ ಬಿ ದಾವಾ ಸ್ವತ್ತಿನ ಪಂಚಾಯಿತಿ ದಾಖಲೆಗಳು ನನ್ನ ತಾಯಿ ಒಂದನೇ ವಾದಿಯ ಹೆಸರಿಗಿದ್ದು , ಆ ಆಸ್ತಿ ಭೂಪರಿವರ್ತನೆಗೆ ಒಳಪಟ್ಟಿಲ್ಲ. ನಮ್ಮ ತಂದೆಯ ಹೆಸರಿಗಾಗಲೀ ಅಥವಾ ತಾಯಿ ಹೆಸರಿಗಾಗಲೀ ಪಂಚಾಯಿತಿಯಲ್ಲಿ ಹಕ್ಕು ಬದಲಾವಣೆ ವಹಿ ಆಗಿರುವುದಿಲ್ಲ. ದಾವ ಬಿ ಸ್ವತ್ತಿನ ಕುರಿತಾಗಿ ವಾದಿಯಾಗಲೀ ಅಥವಾ ಅವರ ಪೂರ್ವಿಕರಾಗಲೀ ಯಾವುದೇ ದಾಖಲೆಗಳನ್ನು ನಮಗೆ ಬರೆದು ಕೊಟ್ಟಿಲ್ಲ ಎಂದರೆ ಸರಿಯಲ್ಲ.

6. ವಾದಿಯ ತಂದೆ ತೀರಿಹೋದ ನಂತರ ಆ ಮನೆಗೆ ಯಜಮಾನ ಇಲ್ಲದ ಕಾರಣ ನಾನು ಮತ್ತು ನನ್ನ ತಂದೆ ಸೇರಿ ದಾವಾ ಬಿ ಸ್ವತ್ತಿನಲ್ಲಿ ಅಕ್ರಮವಾಗಿ ಮನೆ ಕಟ್ಟಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾವು ಪಂಚಾಯಿತಿಯ ಅಧಿಕಾರಿಗಳ ಜೊತೆ ಷಾಮಿಲಾಗಿ ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಾಯಿ ಹೆಸರಿಗೆ ಖಾತೆ ದಾಖಲೆಗಳಿದ್ದ ಬಗ್ಗೆ ದಾಖಲೆಗಳನ್ನು ಸಲ್ಲಿಸುತ್ತೇನೆ. ನಮ್ಮ ತಾಯಿ ಹೆಸರಿಗೆ ಪಂಚಾಯಿತಿಯಲ್ಲಿ ದಾಖಲಾತಿಗಳಿಲ್ಲ ಎಂದರೆ ಸರಿಯಲ್ಲ.

7. ವಾದಿ ದಾವಾ ಬಿ ಸ್ವತ್ತಿನಲ್ಲಿ ನಾವು ಅಕ್ರಮವಾಗಿ ಕಟ್ಟಿ ಕೊಂಡ ಮನೆಯನ್ನು ಬಿಟ್ಟು ಕೊಡುವಂತೆ ಕೇಳಿದಾಗ ನಿರಾಕರಣೆಮಾಡಿದ್ದರಿಂದ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿ ಪೊಲೀಸರಿಗೆ ದೂರನ್ನು ದಾಖಲಿಸಿದ್ದು ನಿಜ. ಆದರೆ ಬಿಟ್ಟುಕೊಡು ಎಂದು ನಮ್ಮನ್ನ ಕೇಳಿಲ್ಲ. ಆದರೆ ಪೋಲೀಸ್ ಠಾಣೆಯಲ್ಲಿ ಬಿಟ್ಟು ಕೊಡುವಂತೆ ಕೇಳಿದ್ದಾರೆ. ನಾವು ಬಿಟ್ಟು ಕೊಡದ ಕಾರಣ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ದಾವಾ ಬಿ ಸ್ವತ್ತಿನ ದಾವ ಎ ಸ್ವತ್ತಿನ ಒಂದು ಭಾಗ ಎಂದರೆ ಸರಿಯಲ್ಲ.

8. 2002 ರಲ್ಲಿ ಹದ್ದುಬಸ್ತಿಗಾಗಿ ಪಾರ್ವತಮ್ಮನವರು ಅರ್ಜಿಸಲ್ಲಿಸಿದ್ದರು. ಆ ಹದ್ದುಬಸ್ತಿನ ದಾಖಲೆಗಳನ್ನು ನೋಡಿಲ್ಲ. ದಾವಾ ಬಿ ಸ್ವತ್ತು ದಾವ ಎ ಸ್ವತ್ತಿನ ಭಾಗವಾದ್ದರಿಂದ ಅದರ ಮಾಲೀಕರಾದ ವಾದಿಗೆ ಬಿಟ್ಟುಕೊಡಲು ಹೊಣೆಗಾರನಾಗಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಮನೆ ಗ್ರಾಮ ಠಾಣದಲ್ಲಿದೆ ಸರ್ವೆ ನಂ. 1/3 ರಲಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದಿಂದ ನಿಯೋಗಿಯನ್ನು ನೇಮಕಮಾಡಿ ಅಳತೆ ಮಾಡಿಸಲು ತಕರಾರಿಲ್ಲ ಮತ್ತು ಒಂದು ವೇಳೆ ದಾವಾ ಎ ಸ್ವತ್ತಿನ ಭಾಗ ಬಿ ಸ್ವತ್ತು ಎಂದು ಕಂಡು ಬಂದರೆ ಅದನ್ನು ಬಿಟ್ಟುಕೊಡುತ್ತೇನೆ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.